# CENTRAL BOARD OF SECONDARY EDUCATION

# KEY ANSWERS-1

# SUBJECT: KANNADA

# SUBJECT CODE - 015

# CLASS - X

# (2020 - 2021)

**TIME: 3 HOURS** ಮಾದರಿ ಪ್ರಶ್ನೆಪತ್ರಿಕೆ-1, ಉತ್ತರಗಳು **MARKS: 80**

---

**I. (a)ಗದ್ಯಾಂಶ – 1 ರ ಉತ್ತರಗಳು** 5

1. ಶಿಸ್ತು
2. ಕುಮಾರವ್ಯಾಸ
3. ಅಶಿಸ್ತು
4. ಬಜೆಟ್
5. ಆತ್ಮವಿಶ್ವಾಸ

**(b) ಗದ್ಯಾಂಶ – 2 ರ ಉತ್ತರಗಳು** 5

1. ಕಾಲಾಪಾನಿ
2. ಜಮ್ಮು-ಕಾಶ್ಮೀರ
3. ಭಾರತ-ಚೀಣಾ-ನೇಪಾಳ
4. ಲಿಪುಲೆಖ್
5. ಇಂಡೋ ಟಿಬೆಟನ್

**II.(a) ಗದ್ಯಾಂಶ – 3 ರ ಉತ್ತರಗಳು** 5

1. ಸುಮೇರಿಯ ನಾಗರೀಕತೆ
2. ಭಾಷೆ
3. ಬರಹ-ಚಿತ್ರರೂಪದ
4. ಮನಮುಟ್ಟಿದಾಗ

5. ಕಲ್ಲಿನ ಮೇಲಿನ ಚಿತ್ರಗಳು

**(b) ಗದ್ಯಾಂಶ – 4 ರ ಉತ್ತರಗಳು.** **5**

1. ಉದ್ಯಾನವಿನ್ಯಾಸಗಾರ
2. ಇಂಗ್ಲೆಂಡ್ ಆಳ್ವಿಕೆ
3. ಸಯ್ಯಾಜಿರಾವ್ ಮಹಾರಾಜರು
4. ಕ್ಯುರೇಟರ್
5. ಲಾಲ್ ಬಾಗ್

**(ಅನ್ವಯಿಕ ವ್ಯಾಕರಣ)**

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** 4

1. ಸವರ್ಣದೀರ್ಘಸಂಧಿ
2. ಕರ್ಮಧಾರೆಯ ಸಮಾಸ
3. ವಂಧ್ಯಾ
4. ಹೇಡಿ
5. ಚತುರ್ಥೀವಿಭಕ್ತಿ

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **4**

1. ಪ್ರೀತಿ
2. ದ್ವಿರುಕ್ತಿ
3. ಅನ್ವರ್ಥನಾಮ
4. ಕ್ರಿಯಾಪದ
5. ಇದು

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **4**

1. ಬರುತ್ತಿದ್ದಾರೆ
2. ಯುದ್ಧವು ಅಶೋಕನಿಂದ ಮಾಡಲ್ಪಟ್ಟಿತು
3. ಮರಿ
4. ಪಟಪಟ

5. ಕೋಣ ನೀರಿಗೆ ಎಳೆಯಿತು

**VI.** **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ನಾಲ್ಕು ಉತ್ತರವನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಪದವನ್ನು ಆರಿಸಿ ಬರೆಯಿರಿ.** **4**

1. ಸಂಭವನಾರ್ಥಕ
2. ವಿಧ್ಯರ್ಥಕ
3. ನಿಷೇಧಾರ್ಥಕ
4. ಪೊರ್ಚ್ ಗೀಸ್
5. ದ್ವಿರುಕ್ತಿ

**(ಬಹು ಆಯ್ಕೆ ಪ್ರಶ್ನೆ- ಪಠ್ಯಗಳ ಅಧ್ಯಯನ) =14 ಅಂಕಗಳು.**

**VII.** **ಪದ್ಯಾಂಶದ ಉತ್ತರಗಳು** **4**

1. ಹತಾರ
2. ಹಲಗಲಿ ಬೇಡರು
3. ಮುಂಗಾರಿನ
4. ಹೆಬಲಕ

**VIII.** **(a) ಗದ್ಯಾಂಶದ ಉತ್ತರಗಳು**

1. ಇರಸಾಲಿಗಾಗಿ
2. ಮದಲಿಂಗ ಕಣಿವೆ
3. ಶಾನುಭೋಗರ ದುಂಡುದುಂಡಾದ ಶರೀರ
4. ಅಭಿಮುಖವಾಗಿ
5. ಆರನೆಯ ಇಂದ್ರಿಯ 5

**IX. ಈ ಕೆಳಗೆ ಕೊಟ್ಟಿರುವ ಪಠ್ಯಪೂರಕಪಾಠದ ಭಾಗವನ್ನು ಓದಿಕೊಂಡು ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **1X5=5**

1.ಪುಸ್ತಕಗಳು, ಕೈಚೀಲ

2. ಸಹೋದರಿ

3. ಬ್ರೀಟೀಷರ

4. ಜನರಲ್ ಡಯರ್

5.1650

X. **ಪತ್ರಲೇಖನ** **4**

- ಇಂದ ಮತ್ತು ಅವರಿಗೆ -- ½
- ದಿನಾಂಕ -- ½
- ಸಂಬೋಧನೆ --- ½
- ಪತ್ರದ ಒಡಲು -1½
- ಮುಕ್ತಾಯದ ಒಕ್ಕಣೆ -- ½
- ಭಾಷಾಶೈಲಿ --½

**XI** ವರದಿ **4**

- ಶೀರ್ಷಿಕೆ — ½
- ಸ್ಥಳ ಮತ್ತು ದಿನಾಂಕ ---1
- ವರದಿಯ ಒಡಲು ---2
- ವರದಿಗಾರರ ರುಜು - -½

**XII ಪ್ರಬಂಧ** **4**

- ಪೀಠಿಕೆ --½
- ವಿಷಯ ವಿವರಣೆ -2
- ಉಪಸಂಹಾರ/ಮುಕ್ತಾಯ --½
- ಭಾಷಾಶೈಲಿ - 1

**XIII. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.** **2X4=08**

1. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?

ಉತ್ತರ: ಮುದುಕಿಯು ರಾಹಿಲನಿಗೆ "ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು, ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆ. ಆದರೆ

ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ? ಯುದ್ಧವಂತೆ ಯುದ್ಧ!' ಎಂದು ಯುದ್ಧದ ಬಗ್ಗೆ ತಿರಸ್ಕಾರದಿಂದ ಹೇಳಿದಳು.

2. ಕವಿ ಜಿ.ಎಸ್. ಶಿವರುದ್ರಪ್ಪನವರು ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ಎಂದಿದ್ದಾರೆ?

   ಉತ್ತರ: ಜಿ. ಎಸ್. ಶಿವರುದ್ರಪ್ಪನವರು ತಮ್ಮ ಕವನದಲ್ಲಿ ಪ್ರತಿಯೊಂದು ಮತಧರ್ಮವೂ ಬೇರಯಾದರೈ ಭಾವನೆ ಒಂದೇ ಎಂಬ ವಿಚಾರವನ್ನು ಬಿತ್ತಿ ಬದುಕಬೇಕಾಗಿದೆ, ಅನುಮಾನ,ಭಯ,ಸಂಶಯ ಮುಂತಾದವುಗಳಿಂದ ಮಂಕಾಗಿರುವ, ಧೈರ್ಯಗುಂದಿರುವ ಕಣ್ಣಿನಲ್ಲಿ ನೂತನ ಯೋಜನೆಗಳನ್ನು ಬಿತ್ತಬೇಕು. ಆ ಮೂಲಕ ಸದೃಢವಾದ ಸಮೃದ್ಧವಾದ ಸಮಾಜವನ್ನು ಕಟ್ಟಬೇಕಾಗಿದೆ ಎಂದು ಹೇಳಿದ್ದಾರೆ.

3. ಮೃಗದ ಬಾಹ್ಯ ಆಕಾರ ಹೇಗಿತ್ತು?

   ಉತ್ತರ: ಮೃಗವು ಕೋರೆಹಲ್ಲು, ಹಂದಿಯ ದೇಹ,ತೋಳದ ಚಲನೆ, ಕರ್ಕಶ ಸದ್ದು, ಗೊಗ್ಗರು ಧ್ವನಿಯನ್ನು ಹೊಂದಿತ್ತು.

4. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?

   ಉತ್ತರ: ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ "ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದರ ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ"ಎಂದಾಗಿದೆ.

**XIV. ಈ ಕೆಳಗಿನ ಪ್ರಶ್ನೆಗಳಿಗೆ 5-6 ವಾಕ್ಯಗಳಲ್ಲಿ ಉತ್ತರಿಸಿ. 3X2= 6**

1. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು?

   ಉತ್ತರ: ಲಕ್ಷ್ಮಣನು ತನ್ನ ಅಣ್ಣನಾದ ಶ್ರೀರಾಮನನ್ನು "ಅಣ್ಣಾ ಸಹಿಸಿಕೋ, ಸೂರ್ಯನೇ ಕಾಂತಿಗುಂದಿದರೆ ಆ ಕಾಂತಿಗೆ ಸ್ಥಳ ಎಲ್ಲಿದೆ? ರಾಮನೇ ಹೆದರಿದರೆ ಯಾರು ಸ್ಥಿರವಾಗಿ ನಿಲ್ಲಬಲ್ಲರು? ನೀನು ಸೂರ್ಯನಂತಿರುವವನು, ಕಾಂತಿಗುಂದಬೇಡ. ಧೈರ್ಯ ತಂದುಕೋ" ಎಂದು ಸಂತೈಸಿದನು.

2. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

   ಉತ್ತರ-ಬಿರುಗಾಳಿಯ ಹೊಡೆತಕ್ಕೆ ಹಡಗು ಹೊಯ್ದಾಡುತ್ತಿದೆ. ಅದನ್ನು ಪ್ರೀತಿಯ ಹಣತೆಯಲ್ಲಿ ಮುನ್ನಡೆಸಬೇಕಾಗಿದೆ.

**XV. ಕೆಳಗಿನ ಪ್ರಶಗಳನ್ನು ಸಂದರ್ಭದೊಡನೆ ವಿವರಿಸಿ. 3X2=6**

1. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."

ಉತ್ತರ: ಈ ಮಾತನ್ನು ಡಾ|| ಡಿ.ಎಸ. ಜಯಪ್ಪಗೌಡರು ಬರೆದ 'ಭಾಗ್ಯಶಿಲ್ಪಿಗಳು' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ವಿಶ್ವೇಶ್ವರಯ್ಯನವರ ಸಾಧನೆಗಳ ಬಗ್ಗೆ ವಿವರಿಸುವಾಗ ಹೇಳಿದ್ದಾರೆ.

ವಿಶ್ವೇಶ್ವರಯ್ಯನವರು ಅಣೆಕಟ್ಟುಗಳಿಗೆ ಅಳವಡಿಸಲು ತಾವಾಗಿಯೇ ತೆರೆಯುವ ಮುಚ್ಚುವ ಬಾಗಿಲುಗಳನ್ನು ಅನ್ವೇಷಿಸಿದರು. ಅಂಥ ಸ್ವಯಂಚಾಲಿತ ಬಾಗಿಲುಗಳನ್ನು ಪೂನಾದ ಪೀಪ್ ಜಲಾಶಯಕ್ಕೆ ಅಳವಡಿಸಿ ಯಶಸ್ವಿಯಾದರು. ಈ ಸ್ವಯಂಚಾಲಿತ ಬಾಗಿಲುಗಳೇ ವಿಶ್ವೇಶ್ವರಯ್ಯನವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿದಂತಾಯಿತು ಎಂದು ಹೇಳಿದ್ದಾರೆ.

**ಅಥವಾ**

"ಪೊನ್ನನೆಲ್ಲಮಂ ನೀನೆ ಕೊಂಡೆ"

ಉತ್ತರ: ಈ ಮಾತನ್ನು ದುರ್ಗಸಿಂಹ ಕವಿ ಬರೆದಿರುವ 'ವೃಕ್ಷಸಾಕ್ಷಿ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳುವನು.

ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ವೆಚ್ಚಕ್ಕೆ ಹಣಬೇಕು. ಸಂಪತ್ತನ್ನು ಹುಗಿದಿರುವಲ್ಲಿಗೆ ಹೋಗೋಣ ಬಾ" ಎಂದು ಕರೆಯುತ್ತಾನೆ. ಇಬ್ಬರೂ ಹೋಗಿ ನೋಡಿದಾಗ ಅಲ್ಲಿ ಹಣವಿರುವುದಿಲ್ಲ. ಆಗ ಕಪಟಿ ದುಷ್ಟಬುದ್ಧಿಯು ಗಾಬರಿಗೊಂಡವನಂತೆ ಎಲ್ಲವನ್ನೂ ಕಳೆದುಕೊಂಡವನಂತೆ ನಟಿಸುತ್ತಾ ಧರ್ಮಬುದ್ಧಿಗೆ ನನ್ನ ಹಣವನ್ನೆಲ್ಲವನ್ನೂ ತೆಗೆದುಕೊಂಡಿದ್ದಾನೆಂದು ಆರೋಪಿಸುತ್ತಾನೆ.

2. ಸಂದರ್ಭದೊಡನೆ ವಿವರಿಸಿ.

"ಬೇರೆ ಬಣ್ಣವನೆ ಕಾಣೆ"

ಉತ್ತರ: ಈ ವಾಕ್ಯವನ್ನು ಕುವೆಂಪು ಅವರು ಬರೆದಿರುವ 'ಹಸುರು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಹೇಳಿದ್ದಾರೆ.

ಆಶ್ವೀಜ ಮಾಸದಲ್ಲಿ ಬತ್ತದ ಗದ್ದೆಗೆ ಮುತ್ತುವ ಗಿಳಿಗಳ ಹಸುರು ಬಣ್ಣದ ನೋಟ; ಅದರ ಪಕ್ಕದಲ್ಲೇ ಕಾಡಂಚಿನಲ್ಲಿ ಫಲಭರಿತ ಅಡಕೆಯ ತೋಟ; ಹುಲ್ಲಿನ ಮಕಮಲ್ಲಿನ ಹೊಸಪಚ್ಚೆಯ ಜಮಖಾನೆ ಹರಡಿದಂತೆ ಭೂಮಿಯು ಹಸುರಿನಿಂದ ಮೈ ಮುಚ್ಚಿರುವ ಬಗೆಯನ್ನು ವರ್ಣಿಸು ಸಂದರ್ಭದಲ್ಲಿ ಈ ಮಾತು ಬಂದಿದೆ. ಭೂಮಿಯ ಮೇಲೆ ಎಲ್ಲೆಂದರಲ್ಲಿ ವಿವಿಧ ರೂಪದಲ್ಲಿ ಹಸುರು ಪಸರಿಸಿರುವುದನ್ನು ನೋಡಿ ರಸಾನಂದ ಹೊಂದಿದ ಕವಿ ಬೇರೆ ಬಣ್ಣಗಳೇ ಕಾಣದು ಎಂದು ಹೇಳಿದ್ದಾರೆ.

ಅಥವಾ

"ನಿನ್ನಪದೆಸೆಯ ಬಯಸುವನಲ್ಲ".

ಉತ್ತರ: ಈ ಮಾತನ್ನು ಕುಮಾರವ್ಯಾಸ ಕವಿ ಬರೆದಿರುವ 'ಕೌರವೇಂದ್ರನ ಕೊಂದೆ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳುತ್ತಾನೆ.

ಶ್ರೀಕೃಷ್ಣನು ಕರ್ಣನಿಗೆ ಅವನ ಜನ್ಮವೃತ್ತಾಂತವನ್ನು ತಿಳಿಸುತ್ತಾನೆ. ನೀನೇ ರಾಜನಾಗಬೇಕಾದವನು. ನಿನ್ನನ್ನು ರಾಜನನ್ನಾಗಿ ಮಾಡಿ, ಕೌರವ-ಪಾಂಡವರು ನಿನ್ನನ್ನು ಸೇವಿಸುವಂತೆ ಮಾಡುತ್ತೇನೆ. ಆಗ ನೀನು ವೈಭವದಿಂದ ಬದುಕಬಹುದು ಎಂಬೆಲ್ಲಾ ಆಮಿಷಗಳನ್ನು ತೋರಿಸುತ್ತಾನೆ.ಈ

ಮಾತುಗಳಿಂದ ಕರ್ಣನಿಗೆ ದುಃಖವಾಗುತ್ತದೆ. ಕರ್ಣನ ಮನಸ್ಥಿತಿ, ಮೌನವನ್ನು ಅರಿತ ಕೃಷ್ಣನು ಅವನನ್ನು ಸಮಾಧಾನಪಡಿಸುತ್ತಾ ನಿನಗೆ ನನ್ನ ಮಾತು ಇಷ್ಟವಾಗಲಿಲ್ಲವೇ? ಮೌನವೇಕೆ, ನಾನು ನಿನಗೆ ಕೇಡನ್ನು - ಕೀಳುದೆಸೆಯನ್ನು ಬಯಸುವವನಲ್ಲ ನಿನ್ನ ಒಳ್ಳೆಯದಕ್ಕೇ ಹೇಳಿದೆ ಎಂದು ಹೇಳುತ್ತಾನೆ.

**XVI. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ. 4X2=08**

1. ದುಷ್ಟಬುದ್ಧಿಯ ಮಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

ಉತ್ತರ: ದುಷ್ಟಬುದ್ಧಿ, ಧರ್ಮಬುದ್ಧಿ ಇಬ್ಬರೂ ತಾವು ಸಂಪಾದಿಸಿದ ಸಂಪತ್ತನ್ನು ಹಂಚಿಕೊಳ್ಳೋಣವೆಂದು ಧರ್ಮಬುದ್ಧಿಯು ಹೇಳದಾಗ ದುಷ್ಟಬುದ್ಧಿ ಖರ್ಚಿಗೆ ಬೇಕಾಗುವಷ್ಟನ್ನು ತೆಗೆದುಕೊಂಡು, ಉಳಿದುದನ್ನು ಮರದ ಹತ್ತಿತ ಹುಗಿದಿಡೋಣವೆನ್ನುತಾನೆ. ಆಗಲೇ ಅವನ ಮನದಲ್ಲಿ ಎಲ್ಲಾ ಸಂಪತ್ತನ್ನು ಅಪಹರಿಸಬೇಕೆಂಬ ದುರಾಲೋಚನೆಯಿರುತ್ತದೆ. ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ವೆಚ್ಚಕ್ಕೆ ಹಣಬೇಕು. ಸಂಪತ್ತನ್ನು ಹುಗಿದಿರುವಲ್ಲಿಗೆ ಹೋಗೋಣ ಬಾ" ಎಂದು ಕರೆಯುತ್ತಾನೆ. ಇಬ್ಬರೂ ಹೋಗಿ ನೋಡಿದಾಗ ಅಲ್ಲಿ ಹಣವಿರುವುದಿಲ್ಲ. ಆಗ ಕಪಟಿ ದುಷ್ಟಬುದ್ಧಿಯು ಗಾಬರಿಗೊಂಡವನಂತೆ ಎಲ್ಲವನ್ನೂ ಕಳೆದುಕೊಂಡವನಂತೆ ನಟಿಸುತ್ತಾ ಧರ್ಮಬುದ್ಧಿಗೆ ನನ್ನ ಹಣವನ್ನೆಲ್ಲವನ್ನೂ ತೆಗೆದುಕೊಂಡಿದ್ದಾನೆಂದು ಆರೋಪ ಹೊರೆಸಿ, ತಾನು ಹಾಳಾದೆನೆಂದು ಬೊಬ್ಬೆ ಹೊಡೆಯುತ್ತಾನೆ. ನ್ಯಾಯಾಧಿಕರಣದವರಿಗೆ ದೂರು ಕೊಡುತ್ತಾನೆ. ಧರ್ಮಬುದ್ಧಿಯೇ ತನ್ನೆಲ್ಲಾ ಹೊನ್ನನ್ನು ಕದ್ದಿರುವನೆಂಬುದಕ್ಕೆ ಮರವೇ ಸಾಕ್ಷಿ, ಅದು ಸಾಕ್ಷಿ ಹೇಳುತ್ತದೆ ಎಂದು ನ್ಯಾಯತೀರ್ಮಾನಿಸುವವರಿಗೆ ಹೇಳಿ ಅಚ್ಚರಿ ಮೂಡಿಸುತ್ತಾನೆ. ಒಲ್ಲದ ಮನಸ್ಸಿನ ತಂದೆಗೆ ಹೇಳಿ ಒಪ್ಪಿಸಿ ಮರದ ಪೊಟರೆಯಲ್ಲಿ ಅಡಗಿಸಿ ಕೂರಿಸುತ್ತಾನೆ. ಅವನು ಮಗನ ಮೇಲಿನ ಪ್ರೀತಿಯಿಂದ ನ್ಯಾಯಾಧಿಕರಣದವರು ಹಾಗೂ ನೆರೆದ ಜನಗಳ ಮುಂದೆ ಧರ್ಮಬುದ್ಧಿಯೇ ಹಣವನ್ನು ತೆಗೆದುಕೊಂಡರುವನೆಂದು ಮರವು ಹೇಳುವಂತೆ ಹೇಳುತ್ತಾನೆ. ಈ ಹಂತದವರೆಗೂ ದುಷ್ಟಬುದ್ಧಿಯ ತಂತ್ರಗಾರಿಕೆ ಸಫಲವಾಗುತ್ತದೆ. ಮರದ ಮಾತನ್ನು ಆಲಿಸಿದ ಧರ್ಮಬುದ್ಧಿಗೆ ಇದರಲ್ಲೇನೋ ಮೋಸವಿದೆ ಎಂದೆನಿಸುತ್ತದೆ. ಅವನು ಮರಕ್ಕೆ ಸುತ್ತು ಬಂದು ಪರೀಕ್ಷಿಸಿ, ರಹಸ್ಯವನ್ನು ಅರಿಯುತ್ತಾನೆ. ಅದನ್ನು ಪ್ರಕಟಪಡಿಸದೆ ತಾನೇ ತಪ್ಪು ಮಾಡಿದವನೆಂದು ತೋರಿಸಿಕೊಳ್ಳುತ್ತಾ, ಮರದ ಪೊಟರೆಗೆ ಹುಲ್ಲು, ಕಟ್ಟಿಗೆಗಳನ್ನು ತುಂಬಿ ಬೆಂಕಿ ಇಡುತ್ತಾನೆ. ಆಗ ಅದರೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಕೂಗಿಕೊಳ್ಳುತ್ತಾ ಪೊಟರೆಯಿಂದ ಹೊರಬರಲಾರದೆ ಸಾಯುತ್ತಾನೆ. ದುಷ್ಟಬುದ್ಧಿಯೇ ಅಪರಾಧಿ ಎನ್ನುವುದು ನ್ಯಾಯಾಧಿಕರಣದವರಿಗಷ್ಟೇ ಅಲ್ಲದೆ ಜನ ಸಮೂಹಕ್ಕೂ ಗೊತ್ತಾಗುತ್ತದೆ. ಧರ್ಮಬುದ್ಧಿಯ ಸಮಯಸ್ಫೂರ್ತಿ ಅವನ ವಿರುದ್ಧವಾಗಿ ಮಾಡಿದ ದುಷ್ಟಬುದ್ಧಿಯ ತಂತ್ರಗಾರಿಕೆ ಅವನಿಗೇ ತಿರುಗುಬಾಣವಾಗಿ ಪರಿಣಮಿಸುತ್ತದೆ.

**ಅಥವಾ**

ವಿಶ್ವೇಶ್ವರಯ್ಯನವರು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಯನ್ನು ತಿಳಿಸಿ.

ಉತ್ತರ: ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂಬ ನಂಬಿಕೆ ವಿಶ್ವೇಶ್ವರಯ್ಯರದ್ದಾಗಿತ್ತು. ಅವರು ಮೈಸೂರು ಸಂಸ್ಥಾನದ ದಿವಾನರಾದೊಡನೆ ಶಿಕ್ಷಣ ಸುಧಾರಣೆಗೆ ಹಲವು ಯೋಜನೆಗಳನ್ನು ರೂಪಿಸಿದರು. 1913ರಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ನಿಬಂಧನೆಯನ್ನು ಜಾರಿಗೆ ತಂದರು. ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿದ್ದ ಪ್ರೌಢಶಿಕ್ಷಣ ಶಾಲೆಗಳನ್ನು ಬದಲಿಸಿದರು. ಸಂಸ್ಥಾನವೇ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆಯನ್ನು ನಡೆಸುವ ವ್ಯವಸ್ಥೆ ಮಾಡಿದರು. ಮೈಸೂರು ವಿಶ್ವವಿದ್ಯಾಲಯವನ್ನು ಆರಂಭಿಸಿದರು. ಶಿಕ್ಷಣ ಕೆಲವರ ಸೊತ್ತಾಗದೆ ಎಲ್ಲರ ಹಕ್ಕಾಗಬೇಕು ಎಂದು ತಿಳಿದಿದ್ದ ಅವರು ತಾಂತ್ರಿಕ ಮತ್ತು ವೃತ್ತಿಶಿಕ್ಷಣಕ್ಕೆ ಆದ್ಯತೆ ನೀಡಿದರು. ಮಹಿಳಾಶಿಕ್ಷಣಕ್ಕಾಗಿ ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ಬೆಂಗಳೂರಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಶಾಲೆ, ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆಗಳನ್ನು ಪ್ರಾರಂಭಿಸಿದರು. ವಿದ್ಯಾರ್ಥಿವೇತನವನ್ನು ನೀಡುವ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅವಕಾಶ ಮಾಡಿದರು. ಗ್ರಂಥಾಲಯಗಳನ್ನು ಆರಂಭಿಸಿದರು. ಈ ರೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಶಿಕ್ಷಣ ಕ್ಷೇತ್ರಕ್ಕೆ ವಿಶೇಷ ಕೊಡುಗೆಗಳನ್ನು ನೀಡಿದ್ದಾರೆ.

**XVII. ಈ ಕೆಳಗಿನ ಪ್ರಶ್ನೆಗಳಿಗೆ 8-10 ವಾಕ್ಯಗಳಲ್ಲಿ ಉತ್ತರಿಸಿ.** **4X2=08**

ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

ಉತ್ತರ: ಶ್ರೀರಾಮನ ಅಶ್ವಮೇಧ ಯಾಗದ ಕುದುರೆಯು ದೇಶವಿದೇಶಗಳಲ್ಲಿ ಸಂಚರಿಸುತ್ತಾ ವಾಲ್ಮೀಕಿ ಮುನಿಗಳ ಆಶ್ರಮದತ್ತ ಬಂದಿತು. ಅಲ್ಲಿಯ ಉದ್ಯಾನದ ಒಳಗೆ ಬೆಳೆದಿದ್ದ ಹಸಿರು ಹುಲ್ಲನ್ನು ಕಂಡು ಅದಕ್ಕೆ ತಿನ್ನುವ ಆಸೆಯಾಯಿತು.ಆ ತೋಟದೊಳಗೆ ನುಗ್ಗಿ ತುಳಿದು ತೋಟವನ್ನು ಹಾಳು ಮಾಡುತ್ತಿತ್ತು. ಆ ತೋಟವನ್ನು ಯಾವಾಗಲೂ ಹಾಳಾಗದಂತೆ ನೋಡಿಕೊಳ್ಳಲು ಲವನಿಗೆ ವಾಲ್ಮೀಕಿ ಮುನಿಗಳು ಹೇಳಿ ವರುಣ ಲೋಕಕ್ಕೆ ಹೋಗಿದ್ದರು.ಸಂಗಡಿಗರೊಂದಿಗೆ ಬಂದ ಲವನು ಕುದುರೆಯು ಉಪವನವನ್ನು ತುಳಿದು ಹಾಳುಮಾಡುತ್ತಿರುವುದನ್ನು ಕಂಡನು. ಮುನಿಗಳು ತಿರುಗಿ ಬಂದವರೇ ತನಗೆ ಬಯ್ಯುತ್ತಾರೆ ಎಂದುಕೊಳ್ಳುತ್ತಲೇ ಅವನು ಕುದುರೆಯ ಸಮೀಪಕ್ಕೆ ಬಂದನು. ಆಗ ಅವನಿಗೆ ಕುದುರೆಯ ಹಣೆಯ ಮೇಲೆ ಕಟ್ಟಿದ ಪಟ್ಟಿಕೆಯಲ್ಲಿದ್ದ ಬರಹ ಕಾಣಿಸಿತು. ಅದರಲ್ಲಿ "ಈ ಭೂಮಿಯಲ್ಲಿ ಕೌಸಲ್ಯೆಯ ಮಗನಾದ ರಾಮನೊಬ್ಬನೇ ಮಹಾವೀರ. ಇದು ಅವನ ಯಜ್ಞಾಶ್ವ. ನಿಭಾಯಿಸಲು ಸಮರ್ಥರಾದವರು ಅದನ್ನು ತಡೆಯಬಹುದು". ಎಂದು ಬರೆದಿರುವುದನ್ನು ಲವನು ಓದಿದ. ಈ ಭೂಮಿಯಲ್ಲಿರುವವರಲ್ಲಿ ರಾಮನೊಬ್ಬನೇ ವೀರ ಎಂದಿರುವುದನ್ನು ಓದಿದಾಗ ಅದು ರಾಮನ ಸೊಕ್ಕಿನ ಮಾತು, ಆ ಸೊಕ್ಕನ್ನು ಇಳಿಸಬೇಕು. ನನ್ನ ಪರಾಕ್ರಮವನ್ನು ತೋರಿಸಬೇಕು ಎಂದು ಲವನಿಗೆ ತೋಚಿತು. ಜಾನಕಿಯ ಮಗನಾದ ತನ್ನ ಕಾರ್ಯವನ್ನು ರಾಮನಿಗೆ ತೋರಿಸಬೇಕೆಂದು ಲವನು ಯಜ್ಞಾಶ್ವವನ್ನು ಕಟ್ಟಿಹಾಕಿದ.

ಅಥವಾ

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಉತ್ತರ: ಕರ್ಣನು ತಾನು ಸೂತಪುತ್ರನೆಂದೇ ತಿಳಿದುಕೊಂಡಿದ್ದನು. ಕೃಷ್ಣನಿಂದ ಅವನಿಗೆ ತನ್ನ ಜನ್ಮ ರಹಸ್ಯ ತಿಳಿಯಿತು. ಪಾಂಡವರು ತನ್ನ ಸೋದರರು ಎಂದು ತಿಳಿದು ಆಘಾತವಾಯಿತು. ಕೌರವನ ಶತ್ರುಗಳಾದ ಪಾಂಡವರನ್ನು ಕರ್ಣನು ಅದುವರೆಗೂ ತನ್ನ ವೈರಿಗಳೆಂದೇ ಭಾವಿಸಿದ್ದನು. ತನ್ನನ್ನು ಅಂಗರಾಜನನ್ನಾಗಿ ಮಾಡಿದ, ತನಗೊಂದು ಸ್ಥಾನಮಾನವನ್ನಿತ್ತ ದುರ್ಯೋಧನನನ್ನು ತನ್ನ ಯಜಮಾನನೆಂದು ತಿಳಿದು ಅವನಿಗಾಗಿ ಏನನ್ನು ಮಾಡಲು ಸಿದ್ಧನಾಗಿದ್ದನು. ಯುದ್ಧದಲ್ಲಿ ಪಾಂಡವರನ್ನು ಕೊಂದು, ಒಡೆಯನ ಋಣವನ್ನು ತೀರಿಸಬೇಕೆಂಬ ಸಂಕಲ್ಪ ಅವನದಾಗಿತ್ತು.

ಶ್ರೀಕೃಷ್ಣನಿಂದ ಪಾಂಡವರು ತನ್ನ ಸೋದರರೆಂದು ಗೊತ್ತಾದಾಗ ಅವನ ಉತ್ಸಾಹವೆಲ್ಲಾ ಕುಗ್ಗಿ ದಿಕ್ಕು ತೋಚದಂತಾಯಿತು. ಒಡೆಯನನ್ನು ನೆನೆದು ಕೊರಳು ಉಬ್ಬಿತು. ಕಣ್ಣೀರು ಸುರಿಯಿತು. ಕೃಷ್ಣನೊಡನೆ ಹಗೆತನ ಪರಿಣಾಮವನ್ನು ತೋರದೆ ಇರದು ಎನ್ನುವುದು ಅವನಿಗೆ ಖಚಿತವಾಯಿತು. ತನಗೆ ಈ ವಿಚಾರವನ್ನು ತಿಳಿಸಿ ಶ್ರೀಕೃಷ್ಣ ಕೌರವನನ್ನು ಕೊಂದನೆಂದು ಕರ್ಣ ಮನದಲ್ಲಿಯೇ ಕೊರಗಿದನು. ತಾನು ಪಾಂಡವರನ್ನು ಕೊಲ್ಲುವಂತಿಲ್ಲ, ಪಾಂಡವರು ಬದುಕಿದರೆ ಕೌರವನಿಗೆ ಉಳಿಗಾಲವಿಲ್ಲ, ಕೃಷ್ಣನು ತನ್ನನ್ನು ಈ ಸ್ಥಿತಿಗೆ ತಂದಿಟ್ಟ ಎಂದು ಕರ್ಣ ತನ್ನ ಒಡೆಯ ದುರ್ಯೋಧನನಿಗಾಗಿ ಮರುಗಿದನು.

*********